ಒಮ್ಮೆ ಲಭಿಸಿದ ಯಶಸ್ಸನ್ನು ಉಳಿಸಿಕೊಂಡು ಹೋಗುವುದು ಅಷ್ಟು ಸುಲಭವಲ್ಲ. ಏಕೆಂದರೆ ಪ್ರತಿ ಬಾರಿಯೂ ನಿರೀಕ್ಷೆ ಮೇಲೇರುತ್ತಲೇ ಇರುತ್ತದೆ. ಪ್ರೇಕ್ಷಕ ಹೊಸತನ ಬಯಸುತ್ತಾ ಹೋಗುತ್ತಾನೆ. ಯಶಸ್ಸಿನ ತುತ್ತತುದಿಗೆ ಏರುವುದಕ್ಕಿಂತ ಆ ಸ್ಥಾನದಲ್ಲಿ ಉಳಿಯುವುದು ದೊಡ್ಡ ಸವಾಲು ಎಂಬ ಮಾತಿದೆ. ಆ ಮಟ್ಟಿಗೆ ಪ್ರೊ ಕಬಡ್ಡಿ ಲೀಗ್ ಯಶಸ್ವಿಯಾಗಿದೆ.

ದೇಶದಲ್ಲಿ ಹುಟ್ಟಿ ಬೆಳೆದರೂ ಕಾಳಜಿ ಇಲ್ಲದೆ ಸೊರಗಿದ್ದ ಒಂದು ಕ್ರೀಡೆಯನ್ನು ಅಲ್ಪಾವಧಿಯಲ್ಲಿ ರಾಷ್ಟ್ರದ ಎರಡನೇ ಅತಿ ದೊಡ್ಡ ಕ್ರೀಡೆಯನ್ನಾಗಿ ಮಾಡಿರುವುದು, ಆಟಗಾರರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಿರುವುದು ಪ್ರೊ ಕಬಡ್ಡಿ ಲೀಗ್‌ನ ಹಿರಿಮೆ ಕೂಡ.

ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡಿದಾಗಲೂ ಕಬಡ್ಡಿ ಆಟಗಾರರಿಗೆ ಇಷ್ಟೊಂದು ಪ್ರಚಾರ ಸಿಕ್ಕಿರಲಿಲ್ಲ. ಟಿ.ವಿಯಲ್ಲಿ ಆಟವನ್ನು ಪ್ರಸಾರ ಮಾಡಿರಲಿಲ್ಲ. ಈಗ ನೋಡಿ, ಎಷ್ಟೊಂದು ಪ್ರಚಾರ. ಅದೆಷ್ಟೊ ಜನ ಪ್ರೊ ಕಬಡ್ಡಿ ಪಂದ್ಯಗಳನ್ನು ವೀಕ್ಷಿಸಲು ಕಾತರದಿಂದ ಕಾಯುತ್ತಿರುತ್ತಾರೆ. ಶ್ರೀಮಂತರ ಮನೆ ಮಕ್ಕಳ ಕಣ್ಣು ಕೂಡ ಕಬಡ್ಡಿಯತ್ತ ನೆಟ್ಟಿದೆ. ಇದಕ್ಕಿಂತ ಬದಲಾವಣೆ ಬೇಕೇ?

ಈಗ ನಡೆಯುತ್ತಿರುವುದು ಆರನೇ ಆವತರಣಿಕೆ. ಈಗಾಗಲೇ ಅರ್ಧ ದಾರಿ ಸವೆಸಿದೆ. ಈ ಬಾರಿ ಕರ್ನಾಟಕದ 15ಕ್ಕೂ ಅಧಿಕ ಆಟಗಾರರು ವಿವಿಧ ತಂಡಗಳಲ್ಲಿ ಆಡುತ್ತಿದ್ದಾರೆ. ಹೆಚ್ಚಿನವರು ಗ್ರಾಮೀಣ ಪ್ರದೇಶದವರು. ಕೆಲವರು ಮೊದಲ ಬಾರಿ ಕಣಕ್ಕಿಳಿದಿದ್ದರೆ, ಇನ್ನು ಕೆಲವರು ಲೀಗ್‌ನ ಆರಂಭದಿಂದಲೂ ಆಡುತ್ತಿದ್ದಾರೆ. ಈ ಕ್ರೀಡೆಯಿಂದ ಅವರ ಜೀವನ ಮಟ್ಟ ಬದಲಾಗಿದೆ. ಜೀವನಕ್ಕೆ ಆಧಾರಸ್ತಂಭವಾಗಿದೆ.

‘ನಾನು ಯಾವತ್ತೂ ವಿಮಾನ ಏರಿರಲಿಲ್ಲ, ಪಂಚತಾರಾ ಹೋಟೆಲ್‌ನಲ್ಲಿ ಉಳಿದುಕೊಂಡಿರಲಿಲ್ಲ. ಪ್ರೊ ಕಬಡ್ಡಿಯಿಂದಾಗಿ ಅವಕಾಶ ಲಭಿಸಿದೆ. ಜೀವನವೇ ಬದಲಾಗಿದೆ’ ಎಂದು ಹೇಳುತ್ತಾರೆ ನೆಲಮಂಗಲದ ಜೆ.ದರ್ಶನ್.

ತಮಿಳು ತಲೈವಾಸ್‌ನಲ್ಲಿ ಆಡುತ್ತಿರುವ ದರ್ಶನ್ ಅತ್ಯುತ್ತಮ ಕ್ಯಾಚಿಂಗ್ ಮೂಲಕ ಎದುರಾಳಿ ಆಟಗಾರರಲ್ಲಿ ಭಯ ಮೂಡಿಸಿದ್ದಾರೆ. ಈ ಯುವ ಆಟಗಾರ ಹರಾಜಿನಲ್ಲಿ ₹ 28 ಲಕ್ಷಕ್ಕೆ ತಲೈವಾಸ್ ಪಾಲಾಗಿದ್ದಾರೆ.

‘ನಮ್ಮದು ಬಡ ಕುಟುಂಬ. ಸಹೋದರನೊಂದಿಗೆ ಈರುಳ್ಳಿ ವ್ಯಾಪಾರ ಮಾಡುತ್ತಿದ್ದೆ. ಅದಕ್ಕಾಗಿ ಶಿಕ್ಷಣವನ್ನೇ ತೊರೆದೆ. ಜೀವನ ಸಾಗಿಸಲು ಕಷ್ಟವಾಗಿದ್ದ ಸಮಯದಲ್ಲಿ ಪ್ರೊ ಕಬಡ್ಡಿ ನನ್ನ ಕೈ ಹಿಡಿದಿದೆ. ನನಗೆ ಯಾವತ್ತೂ ಇಷ್ಟೊಂದು ದುಡ್ಡು ಲಭಿಸಿರಲಿಲ್ಲ’ ಎಂದು ಅವರು ಖುಷಿ ವ್ಯಕ್ತಪಡಿಸುತ್ತಾರೆ.

ಕಾರ್ಕಳದ ಸುಕೇಶ್ ಹೆಗ್ಡೆ ಕಳೆದ ಬಾರಿ ಗುಜರಾತ್ ಫಾರ್ಚೂನ್ ಜೈಂಟ್ಸ್ ತಂಡ ಮುನ್ನಡೆಸುವ ಅವಕಾಶ ಲಭಿಸಿತ್ತು. ಈ ಬಾರಿ ₹ 28 ಲಕ್ಷ ಮೊತ್ತಕ್ಕೆ ತಮಿಳು ತಲೈವಾಸ್ ಪಾಲಾಗಿದ್ದಾರೆ.

‘ಕಾರ್ಕಳ ಬಳಿಯ ಹಳ್ಳಿಯಲ್ಲಿ ಬಡಕುಟುಂಬದಲ್ಲಿ ಹುಟ್ಟಿದ ನಾನು ಕಷ್ಟದ ಹಾದಿಯಲ್ಲಿ ಬೆಳೆದು ಬಂದು ಈ ಮಟ್ಟಕ್ಕೇರಿದ್ದೇನೆ. ಪ್ರೊ ಕಬಡ್ಡಿ ಲೀಗ್ ನನ್ನ ಬದುಕು ಬದಲಾಯಿಸಿದೆ. ವಿಜಯ ಬ್ಯಾಂಕ್‌ನಲ್ಲಿ ಸಹಾಯಕ ವ್ಯವಸ್ಥಾಪಕನಾಗಿ ಬಡ್ತಿ ಕೂಡ ಲಭಿಸಿದೆ’ ಎಂದು ಸುಕೇಶ್ ಹೇಳುತ್ತಾರೆ.

ಕನ್ಯಾಕುಮಾರಿಯಿಂದ ಬಂದು ಬೆಂಗಳೂರಿನಲ್ಲಿ ನೆಲೆಸಿರುವ ಜೀವಾ ಕುಮಾರ್ ಬದುಕು ಬದಲಾಯಿಸಿದ್ದು ಪ್ರೊ ಕಬಡ್ಡಿ. ಈ ಕ್ರೀಡೆಯಿಂದ ಬಂದ ಹಣದಲ್ಲಿ ಅವರು ಮನೆ ಕಟ್ಟಿಸಿದ್ದಾರೆ.

‘ಪ್ರೊ ಕಬಡ್ಡಿ ಆಡುತ್ತಿರುವ ಕಾರಣಕ್ಕೆ ನನಗೆ ಎಲ್ಲೆಡೆ ಗೌರವ ಸಿಗುತ್ತಿದೆ. ಸ್ನೇಹಿತರು ನನ್ನನ್ನು ನೋಡುವ ದೃಷ್ಟಿಕೋನ ಬದಲಾಗಿದೆ. ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದಾಗಲೂ ಇಷ್ಟೊಂದು ಖ್ಯಾತಿ ಬಂದಿರಲಿಲ್ಲ. ಆಸೆಗೆ ಅಂತ್ಯ ಎಂಬುದಿಲ್ಲ. ಇನ್ನೂ ಎತ್ತರಕ್ಕೆ ಏರುವ ಗುರಿ ಇಟ್ಟುಕೊಂಡಿದ್ದೇನೆ’ ಎನ್ನುತ್ತಾರೆ ಜೀವಾ.

ಜೀವಾ ಸದ್ಯ ಯು.ಪಿ ಯೋಧಾ ತಂಡದಲ್ಲಿ ಆಡುತ್ತಿದ್ದಾರೆ. ಅವರಿಗೆ ಹರಾಜಿನಲ್ಲಿ ₹ 45 ಲಕ್ಷ ಸಿಕ್ಕಿದೆ. ಅವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಉದ್ಯೋಗಿ ಕೂಡ.

ಹೋಟೆಲ್ ಕೆಲಸದಿಂದ ಟಿ.ವಿ ಪರದೆ ಮೇಲೆ: ಯು.ಪಿ ಯೋಧಾ ತಂಡದಲ್ಲಿ ಆಡುತ್ತಿರುವ ರಿಶಾಂಕ್ ದೇವಾಡಿಗ ಈಗ ಸ್ಟಾರ್ ಆಟಗಾರ. ಹಲವು ವರ್ಷಗಳ ಹಿಂದೆಯೇ ಇವರ ಪೋಷಕರು ಕುಂದಾಪುರದಿಂದ ಮುಂಬೈಗೆ ಹೋಗಿ ನೆಲೆಸಿದ್ದರು. ತಂದೆ ಆಟೊ ಓಡಿಸಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದರು. ಪ್ರೊ ಕಬಡ್ಡಿ ಆರನೇ ಆವತರಣಿಕೆಯಲ್ಲಿ ಇವರು ₹ 1.11 ಕೋಟಿಗೆ ಹರಾಜಾಗಿದ್ದಾರೆ. ಎಂಥಾ ಬದಲಾವಣೆ ನೋಡಿ!

‘ಚಿಕ್ಕಂದಿನಿಂದಲೇ ನನಗೆ ಕಬಡ್ಡಿ ಮೇಲೆ ತುಂಬಾ ಪ್ರೀತಿ. ಉದ್ಯೋಗ ಗಿಟ್ಟಿಸಿಕೊಳ್ಳಲು ಅಥವಾ ವೃತ್ತಿಪರ ಆಟಗಾರನಾಗಬೇಕೆಂಬ ಕಾರಣಕ್ಕೆ ನಾನೇನೂ ಕಬಡ್ಡಿ ಆಡುತ್ತಿರಲಿಲ್ಲ. ಮುಂಬೈನಲ್ಲಿ ಹುಟ್ಟಿ ಬೆಳೆದ ನಾನು ಅಂಧೇರಿಯ ಹೋಟೆಲೊಂದರಲ್ಲಿ ಕೆಲಸ ಮಾಡಿ ಕುಟುಂಬ ಮುನ್ನಡೆಸುತ್ತಿದ್ದೆ. ವಾರಾಂತ್ಯದಲ್ಲಿ ಕಬಡ್ಡಿ ಆಡುತ್ತಿದ್ದೆ. ಜೋಪಡಿಯಲ್ಲಿ ವಾಸ ಮಾಡುತ್ತಿದ್ದೆವು. ಈಗ ಅಪಾರ್ಟ್‌ಮೆಂಟ್‌ಗೆ ಸ್ಥಳಾಂತರವಾಗಿದ್ದೇವೆ. ಕಬಡ್ಡಿ ಲೀಗ್ ಆರಂಭವಾಗಿದ್ದು ನನ್ನ ಜೀವನವನ್ನೇ ಬದಲಾಯಿಸಿದೆ’ ಎಂದು ಹೆಮ್ಮೆಯಿಂದ ಹೇಳುತ್ತಾರೆ.

ಪ್ರಶಾಂತ್ ರೈ ಅವರಿಗೆ ₹ 79 ಲಕ್ಷ ನೀಡಿ ಈ ತಂಡ ಖರೀದಿಸಿದೆ. ಮೈಸೂರಿನಲ್ಲಿ ಪದವಿ ಓದುತ್ತಿದ್ದ ಆನಂದ್ ಈಗ ಬೆಂಗಳೂರು ಬುಲ್ಸ್ ತಂಡದಲ್ಲಿ ಆಡುತ್ತಿದ್ದಾರೆ. ಅವರಿಗೆ ₹ 8 ಲಕ್ಷ ಲಭಿಸಿದೆ.

‘ವಿಶ್ವವಿದ್ಯಾಲಯ ಮಟ್ಟದಲ್ಲಿ ಕಬಡ್ಡಿ ಆಡಿಕೊಂಡಿದ್ದೆ. ರಾಷ್ಟ್ರೀಯ ಸೀನಿಯರ್ ಟೂರ್ನಿಯಲ್ಲಿ ರಾಜ್ಯ ತಂಡ ಮೂರನೇ ಸ್ಥಾನ ಪಡೆದ ಕಾರಣ ಪ್ರೊ ಕಬಡ್ಡಿ ಹರಾಜು ಪಟ್ಟಿಯಲ್ಲಿ ನನ್ನ ಹೆಸರು ಸೇರ್ಪಡೆಯಾಯಿತು. ಅದ್ಭುತ ಅವಕಾಶ ದೊರೆಯಿತು. ಇದು ನನ್ನ ಜೀವನಕ್ಕೊಂದು ದಾರಿ ಮಾಡಿಕೊಟ್ಟಿದೆ’ ಎಂದು ಆನಂದ್ ನುಡಿಯುತ್ತಾರೆ.

ವಿಠಲ್ ಮೇಟಿ, ಮಿಥಿನ್ ಕುಮಾರ್, ಸಚಿನ್ ವಿಟ್ಲ, ಬಿ.ಆರ್.ನಿತೇಶ್, ಕೆ.ಜವಾಹರ್ ವಿವೇಕ್, ರಕ್ಷಿತ್, ಅರುಣ್ ಅವರಂಥ ಆಟಗಾರರಿಗೆ ನೆಲೆ ಕಲ್ಪಿಸಿದೆ. ವೀಕ್ಷಕರ ಸಂಖ್ಯೆಯೂ ಹೆಚ್ಚುತ್ತಿದೆ. ದೇಶದಲ್ಲಿ ಹುಟ್ಟಿ ಬೆಳೆದರೂ ಕಾಳಜಿ ಇಲ್ಲದೆ ಸೊರಗಿದ್ದ ಒಂದು ಕ್ರೀಡೆಯನ್ನು ಅಲ್ಪಾವಧಿಯಲ್ಲಿ ರಾಷ್ಟ್ರದ ಎರಡನೇ ಅತಿ ದೊಡ್ಡ ಕ್ರೀಡೆಯನ್ನಾಗಿ ಮಾಡುವುದು ಅಚ್ಚರಿ ಸಂಗತಿ ಅಲ್ಲವೇ? ಒಂದು ಕ್ರೀಡೆಯ ಮಾರುಕಟ್ಟೆಯನ್ನು ಹೀಗೂ ಬೆಳೆಸಬಹುದಲ್ಲವೇ?




ಸುಕೇಶ್ ಹೆಗ್ಡೆ



ರಿಶಾಂಕ್ ದೇವಾಡಿಗ



ದರ್ಶನ್